ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 21-01-2023 ರಂದು ಕಾಡುಗುಡಿ ವಾರ್ಡ್ ಸಂಖ್ಯೆ:104 (ಹಳೆ ನಂ.83)ರ ವಾರ್ಡ್ ಕಮಿಟಿ ಸಭೆಯನ್ನು ಕಾಡುಗುಡಿ, ಹಾಲು ಡೈರಿ ಪಕ್ಕದಲ್ಲಿ ಹೊಸದಾಗಿ ನಿರ್ಮಿಸಿರುವ ಕಾಡುಗುಡಿ ವಾರ್ಡ್ ಕಛೇರಿಯಲ್ಲಿ ಶ್ರೀ.ಶ್ರೀನಿಧಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ

- ಶ್ರೀ.ಶ್ರೀನಿಧಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
- ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು, ಬಿಬಿಎಂಪಿ
- ಶ್ರೀ.ಮಂಜುನಾಥ.ವಿ, ವರ್ಕ್ ಇನ್ಸ್‌ಪೆಕ್ಟರ್, ಬಿಬಿಎಂಪಿ
- ಶ್ರೀ.ಶ್ಯಾಮರಾಜ್, ಗ್ಯಾಂಗ್‌ಮ್ಯಾನ್, ಬಿಬಿಎಂಪಿ
- ಶ್ರೀ.ನಚಿಕೇತ್, ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ
- ಶ್ರೀ.ಮನೋಜ್, ರಾಜಸ್ವಾ ನಿರೀಕ್ಷಕರು, ಬಿಬಿಎಂಪಿ.

ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು

| | |
|---|---|
| 1. ಆನಂದ<br>2. ಸಂಪಂಗಿ<br>3. ಸುಮನ್<br>4. ತಿಪ್ಪೇಸ್ವಾಮಿ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು - ಬಿ.ಬಿ.ಎಂ.ಪಿ, ಎ.ಇ.-ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಸಭೆಗೆ ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

*ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.*

1. ಸಭೆಯಲ್ಲಿ ಎ.ಕೆ.ಜಿ ಕಾಲೋನಿಯ ಶಕ್ತಿ ಕೇಂದ್ರದ ಅಧ್ಯಕ್ಷರಾದ ಶ್ರೀ.ಸಂಪಂಗಿ ರವರು ಒಳಚರಂಡಿ ಕಾಮಗಾರಿಯು ಉಳಿಕೆ ಇರುವುದನ್ನು ಪೂರ್ಣಗೊಳಿಸಲು ಕೋರಿದರು.

- ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯೂ.ಎಸ.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು.

2. ಸಭೆಯಲ್ಲಿ ಸಾರ್ವಜನಿಕರು ವೈಟ್‌ಫೀಲ್ಡ್ ಗ್ಲೋಬಲ್ ಶಾಲೆ ಬಳಿ ಇರುವ ರಸ್ತೆ ಈಗಾಗಲೇ ವೆಟ್‌ಮಿಸ್ಕ್ ಹಾಕಿ ಡಾಂಬೀಕರಣ ಬಾಕಿ ಇರುವುದನ್ನು ಪೂರ್ಣಗೊಳಿಸಲು ಕೋರಿದರು.

- ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ವಾರದಲ್ಲಿ ಡಾಂಬರೀಕರಣ ಮಾಡುವುದಾಗಿ ತಿಳಿಸಿದರು.

3. ಸಭೆಯಲ್ಲಿ ಎ.ಕೆ.ಜಿ ಕಾಲೋನಿಯ ಶಕ್ತಿ ಕೇಂದ್ರದ ಅಧ್ಯಕ್ಷರಾದ ಶ್ರೀ.ಸಂಪಂಗಿ ರವರು ಬೃಹತ್ ರಾಜಕಾಲುವೆಯಲ್ಲಿ ಹೂಳು ತುಂಬಿದ್ದು, ಇದನ್ನು ಕೂಡಲೇ ತೆರವುಗೊಳಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬೃಹತ್ ರಾಜಕಾಲುವೆ ವಿಭಾಗದ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು.

4. ಸಭೆಯಲ್ಲಿ ಸಾರ್ವಜನಿಕರು ಕಾಡುಗುಡಿ ಪೊಲೀಸ್ ಠಾಣೆ ಬಳಿ ಇರುವ ಬಿಡ್ಜ್ ಹಾಗೂ ದಿನ್ನೂರು ಮುಖ್ಯರಸ್ತೆಯಲ್ಲಿ ವಾಹನಗಳ ದಟ್ಟಣೆಯಿಂದಾಗಿ ಮಣ್ಣು ಶೇಖರಣೆಗೊಂಡಿದ್ದು, ಇದನ್ನು ಮೆಕ್ಯಾನಿಕಲ್ ಸ್ವೀಪಿಂಗ್ ಮೂಲಕ ಸ್ವಚ್ಛಗೊಳಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಆರೋಗ್ಯ ನಿರೀಕ್ಷಕರು, ಬಿಬಿಎಂಪಿ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು.

5. ಸಭೆಯಲ್ಲಿ ಸಾರ್ವಜನಿಕರು ದಿನ್ನೂರು ಗ್ರಾಮದಲ್ಲಿ ಬಾಕಿ ಇರುವ ಕಾಮಗಾರಿಗಳಾದ ಸಮುದಾಯ ಭವನ ನಿರ್ಮಾಣ, ಓಪನ್ ಆಡಿಟೋರಿಯಂ ನಿರ್ಮಾಣ, ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ ಹಾಗೂ ಕಾವೇರಮ್ಮ ದೇವಸ್ಥಾನದ ರಸ್ತೆ ಅಭಿವೃದ್ಧಿ ಪಡಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ವಾರ್ಡ್ ಅಭಿಯಂತರರಿಗೆ, ಸದರಿ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ತಿಳಿಸಿದರು.

6. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಸರ್ಕಲ್ ಬಳಿ ಇರುವ ಬಸ್ ನಿಲ್ದಾಣವನ್ನು ಹಿಂದಕ್ಕೆ ಸ್ಥಳಂತರಿಸಲು ಹಾಗೂ ರಸ್ತೆಗಳಲ್ಲಿ ಓಡಾಡುವ ಇನ್ನಿತರೆ ವಾಹನಗಳು ಓಡಾಡಲು ತೊಂದರೇಯಾಗದಂತೆ ಸರಿಪಡಿಸುವಂತೆ ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ಸುರೇಶ್ ರವರು ಈಗಾಗಲೇ ರಾಜಾಕಾಲುವೆಯ ಕಾಮಗಾರಿಯು ಟೆಂಡರ್ ಪ್ರಕೀಯೇಯು ಮೂಗಿದ್ದಿದ್ದು, ತದ ನಂತರ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

7. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ-ಕಾಡುಗುಡಿ ರಸ್ತೆಯಲ್ಲಿ ಸಂತೇ ನಡೆಯುವ ಸಮಯದಲ್ಲಿ ಅಂಗಡಿಯವರು ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದು, ಸಾರ್ವಜನಿಕರ ಓಡಾಡಕ್ಕೆ ತುಂಬಾ ತೊಂದರೆಯಾಗುತ್ತಿರುವುದಾಗಿ ಇದನ್ನು ಸರಿಪಡಿಸಿ ಕೊಡಲು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು, ರವರಿಗೆ ತಿಳಿಸುವುದಾಗಿ ಹೇಳಿದರು.

8. ಎ.ಕೆ.ಜಿ ಕಾಲೋನಿಯಲ್ಲಿ ವಿದ್ಯುತ್ ಕಂಬಗಳು ಹಾಗೂ ಬೀದಿ ದೀಪಗಳನ್ನು ಅಳವಡಿಸಲು ಕೋರಿ.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬೆಸ್ಕಾಂ ಇಲಾಖೆಯ ಅಧಿಕಾರಿಗೆ ವಿದ್ಯುತ್ ಕಂಬಗಳ ಬಗ್ಗೆ ವಿಷಯವನ್ನು ತಿಳಿಸುವುದಾಗಿ ಹಾಗೂ ದೀಪಗಳನ್ನು ಅಳವಡಿಸಲು ಶ್ರೀ.ಶರಥ್, ಸ.ಕಾ.ಅ ವಿಧ್ಯುತ್ ವಿಭಾಗ ಬಿಬಿಎಂಪಿ ರವರಿಗೆ ತಿಳಿಸುವುದಾಗಿ ಹೇಳಿದರು.

9. ಸಿದ್ದಾರ್ಥ ಬಡಾವಣೆಗೆ ಸಂಪರ್ಕ ಕಲ್ಪಿಸಲು ಮ್ಯಾಜಿಕ್ ಬಾಕ್ಸ್ ಅಳವಡಿಸಲು ಈ ಹಿಂದೆ ಹಲವಾರು ಬಾರಿ ಪ್ರಸ್ತಾಪಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ.

➢ ಸದರಿ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು, ಸ.ಕಾ.ಅ ಮೇಜರ್ ರೋಡ್ಸ್ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಮಾತನಾಡಿ, ರೈಲ್ವೆ ಇಲಾಖೆಗೆ ಪತ್ರವನ್ನು ಬರೆದು, ಅನುಮತಿ ಕೋರುವಂತೆ ತಿಳಿಸಿದರು.

10. ಎ.ಕೆ.ಜಿ ಕಾಲೋನಿ ಸ್ಮಶಾನದ ಬಳಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

11. ಚನ್ನಸಂದ್ರ ರಸ್ತೆ - United Elysium Apartment ಇಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

12. ಕಾಡುಗುಡಿ ಪಾರ್ಕ್‌ನಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

13. ಎ.ಬಿ. ವಾಜಪೇಯಿ ರಸ್ತೆಯ ಬದಿ ಇರುವ ಡೆಬ್ರೀಸ್/ ಮಣ್ಣನ್ನು ತೆರವುಗೊಳಿಸಲು ಕೋರಿ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ ರವರು ಮುಂದಿನ ದಿನಗಳಲ್ಲಿ ಮಾಡಿಲಾಗುವುದು ಎಂದು ತಿಳಿಸಿದರು.

14. ವಾರ್ಡ್‌ನಲ್ಲಿ ತುರ್ತು ಅಂಬ್ಯೂಲೆನ್ಸ್‌ನ ಅವಶ್ಯಕತೆ ಇರುವುದಾಗಿ ತಿಳಿಸಿದರು.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಆರೋಗ್ಯಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

15. ಸರ್ಕಾರಿ ಆಸ್ಪತ್ರೆ ಬಳಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

16. ಸಿಧಾರ್ಥ ಬಡಾವಣೆಗೆ ಬಸ್ ವ್ಯವಸ್ಥೆ ಕಲ್ಪಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ವಿಷಯದ ಬಗ್ಗೆ ಬಿ.ಎಂ.ಟಿ.ಸಿ ಇಲಾಖೆಗೆ ಪತ್ರ ಬರೆಯುವುದಾಗಿ ತಿಳಿಸಿದರು.

17. ಕಾಡುಗುಡಿ-ಸೀಗೆಹಳ್ಳಿ ಮುಖ್ಯರಸ್ತೆ ಮಾರ್ಗ ಕಾಶಿವಿಶ್ವನಾಥ ದೇವಸ್ಥಾನ ರಸ್ತೆಯಲ್ಲಿ ಇರುವ ಬ್ರಿಟೀಷ್ ಬಿಡ್ಜ್ ತುಂಬಾ ಹಳೀಯದಾದ ಬಿಡ್ಜ್‌ಯಾಗಿದ್ದು, ಇದರ ಮುಖಾಂತರ ಭಾರಿ ವಾಹನಗಳು ಚಲಿಸುತ್ತಿರುವುದು ಕಂಡುಬಂದಿದ್ದು, ಇದನ್ನು ಕೂಡಲೇ ನಿಲ್ಲಿಸಲು ಹಾಗೂ Restricted height pole ಅಳವಡಿಸುವ ಬಗ್ಗೆ.

➤ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ಮುಂದಿನ ದಿನಗಳಲ್ಲಿ Restricted height pole ಅಳವಡಿಸಲು ಸ್ಥಳ ಪರಿವೀಕ್ಷಣೆ ಮಾಡಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

18. ಪಟಾಲಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಅಭಾವ ಇರುವ ಬಗ್ಗೆ.

➤ ಸದರಿ ವಿಷಯಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಉಳಿಕೆ ಲಿಂಕ್ ಅಳವಡಿಸಿದ ನಂತರ ನೀರು ಪೂರೈಸುವುದಾಗಿ ತಿಳಿಸಿದರು.

19. ಪಟಾಲಮ್ಮ ಬಡಾವಣೆಯಲ್ಲಿ ಅಂಗನವಾಡಿ ಕಟ್ಟಡದ ಕೊರತೆ ಇದ್ದು, ಹೊಸ ಕಟ್ಟಡವನ್ನು ನಿರ್ಮಿಸಿಕೊಡಲು ಕೋರಿ.

➤ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸ್ಥಳ ಪರಿಶೀಲಿಸಿ, ಮುಂದಿನ ದಿನಗಳಲ್ಲಿ ಬರುವ ಅನುದಾನದ ಆದ್ಯತೆಯ ಮೇರೆಗೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸುವುದಾಗಿ ಎಂದು ತಿಳಿಸಿದರು.

20. ಕಾಡುಗುಡಿ ಗ್ರಾಮದಲ್ಲಿ ಬಾಕಿ ಇರುವ ಯು.ಜಿ.ಡಿ ಕಾಮಗಾರಿಯ ಬಗ್ಗೆ.

➤ ಸದರಿ ವಿಷಯಕ್ಕೆ ದೂರವಾಣಿ ಮುಖಾಂತರ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯು, ಸ್ಥಳ ಪರಿವೀಕ್ಷಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

21. ಕಾಡುಗುಡಿ ಗ್ರಾಮದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಯ ದುರಸ್ಥಿಯಾಗಿದ್ದು, ಕುಡಿಯುವ ನೀರಿನ ಅಭಾವ ಇರುತ್ತದೆ ಎಂದು ತಿಳಿಸಿದರು.

➤ ಸದರಿ ವಿಷಯಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯು ಸಮಸ್ಯೆಯನ್ನು ಪರಿಹರಿಸುವುದಾಗಿ ತಿಳಿಸಿದರು.

22. ಪ್ರಶಾಂತ ಬಡಾವಣೆಯಲ್ಲಿ ಅನಧಿಕೃತವಾದ ಅಂಗಡಿಗಳನ್ನು ತೆರವುಗೊಳಿಸುವ ಬಗ್ಗೆ.

➤ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ವಹಿಸಲು ತಿಳಿಸಿದರು.

23. ಚನ್ನಸಂದ್ರ ಬಿಡ್ಜ್ ಬಳಿ ಇರುವ ರಾಜಕಾಲುವೆಯಲ್ಲಿನ ಹೂಳನ್ನು ತೆಗೆಯುವುದು.

➤ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಬೃಹತ್ ರಾಜಕಾಲುವೆ ವಿಭಾಗದವರಿಗೆ ಸೂಕ್ತ ಕ್ರಮ ವಹಿಸಲು ದೂರವಾಣಿ ಮೂಲಕ ತಿಳಿಸಿದರು.

24. ಎ.ಬಿ. ವಾಜಪೇಯಿ ರಸ್ತೆ, ಪಾಲಿಟೆಕ್ನಿಕ್ ಕಾಲೇಜು ರಸ್ತೆ, ಹಾಗೂ ಚನ್ನಸಂದ್ರ್ ಪೆಟ್ರೋಲ್ ಬಂಕ್ ಬದಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕೋರಿ.

➤ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಮೇಜರ್ ರೋಡ್ಸ್ ರವರು ಮುಂದಿನ ದಿನಗಳಲ್ಲಿ ಮಾಡಿಲಾಗುವುದು ಎಂದು ತಿಳಿಸಿದರು.

25. ಚನ್ನಸಂದ್ರ ಸರ್ಕಲ್‌ನಿಂದ ಚನ್ನಂದ್ರ ಬಿಡ್ಜ್ ಅಗಲೀಕರಣ ಮಾಡಿಕೊಡಲು ಕೋರಿ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಮೇಜರ್ ರೋಡ್ಸ್ ರವರಿಗೆ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲು ಸೂಚಿಸಿದರು.

26. ಚನ್ನಸಂದ್ರ ರಾಜಕಾಲುವೆಯ ಹೂಳನ್ನು ತೆಗೆದು ಪಾದಚಾರಿ ಮಾರ್ಗಕ್ಕೆ ಅಡ್ಡಲಾಗಿ ಹಾಕಿರುವುದನ್ನು ತೆರವುಗೊಳಿಸಲು ಕೋರಿ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲು ಸೂಚಿಸಿದರು.

27. ಸಾಯಿ ಬಾಬಾ ಆಶ್ರಮ ಬಳಿ ಬೃಹತ್ ರಾಜಕಾಲುವೆಗೆ ಹಾಗೂ ಎ.ಬಿ.ವಾಜಪೇಯಿ ರಸ್ತೆಯಲ್ಲಿ ಇರುವ ರಾಜಕಾಲುವೆಗೆ ಫೆನ್ಸಿಂಗ್‌ನ್ನು ಅಳವಡಿಸಲು ಕೋರಿ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲು ಸೂಚಿಸಿದರು,

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/01/2023

(ಎನ್.ವೆಂಕಟೇಶ್)
ಸಹಾಯಕ ಅಭಿಯಂತರರು
**ವಾರ್ಡ್ ನಂ: 104 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ